ಇಮೋಜಿ ಭಾಷೆ

ಕರ್ಕಿ ಕೃಷ್ಣಮೂರ್ತಿ



# ‘ಬಾರ್ದೋ ತೋಡೋಲ್’ ಮತ್ತು ಹಾಸ್ಯದ ಹರಿಗೋಲು

ಬರಹಗಾರರ ಉದ್ದೇಶ ಓದುಗನಿಗೆ ಅನವರತವಾದ ಅನುಭೂತಿಯನ್ನು ಕಟ್ಟಿಕೊಡುವುದೇ ಹೊರತು ಕೆಲ ಹೊತ್ತಿನ ಸುಖ ನೀಡಿ ಮರೆಯಾಗುವುದಲ್ಲ. ನಗುವಿಗಿಂತಲೂ ಅವರಿಗೆ ಆನಂದವೇ ಮುಖ್ಯವೆನಿಸಿರಬಹುದು.

‘ಬಾರ್ದೋ ತೋಡೋಲ್’ ಟಿಬೆಟಿಯನ್ನರ ಧಾರ್ಮಿಕ ಪುಸ್ತಕಗಳಲ್ಲೊಂದು. ವ್ಯಕ್ತಿಯ ಮರಣಾನಂತರ ನಮ್ಮಲ್ಲಿ ‘ಗರುಡ ಪುರಾಣ’ವನ್ನು ಪಠಿಸಿದಂತೆ, ಅವರು ಈ ಪುಸ್ತಕವನ್ನು ಓದುತ್ತಾರೆ. ಮನುಷ್ಯನ ಸಾವಿನ ಕ್ಷಣದಿಂದ ಶುರುವಾಗಿ ಆತ ಅಂತಿಮವಾಗಿ ಅನಂತದಲ್ಲಿ ಲೀನವಾಗುವ ನಡುವಿನ ಪ್ರಕ್ರಿಯೆಯನ್ನು ಈ ಪುಸ್ತಕ ತಿಳಿಸುತ್ತದೆ. ಮನುಷ್ಯ ಸತ್ತ ನಂತರ ಮುಕ್ತಿಯನ್ನೋ ಪುನರ್ಜನ್ಮವನ್ನೋ ಹೊಂದುವ ಮೊದಲು ನರಕಸದೃಶವಾದ ಹಲವು ‘ಬಾರ್ದೋ’ಗಳನ್ನು ದಾಟಿ ಹೋಗಬೇಕು. ಪ್ರತಿ ಬಾರ್ದೋದಲ್ಲೂ ಅಪರಿಮಿತ ಹಿಂಸೆಯನ್ನು ಅನುಭವಿಸಬೇಕು. ಅಂಥವುಗಳಲ್ಲಿ ‘ಪಶು ಲೋಕ’ದ ಬಾರ್ದೋ ಕೂಡಾ ಒಂದು ಎಂದು ಹೇಳುತ್ತ, ಈ ಪ್ರಾಣಿಗಳ ಲೋಕದಲ್ಲಿ ‘ನಗೆ’ ಎಂಬುದಿಲ್ಲ ಎನ್ನುವುದನ್ನೂ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

‘ಬಾರ್ದೋ ತೋಡೋಲ್’ ಪುಸ್ತಕದ ಅಧ್ಯಯನ ನಡೆಸಿ ಅಂತರಾರ್ಥವನ್ನು ವಿಶ್ಲೇಷಿಸಿದ ಜಗತ್ತಿನ ಹಲವು ವಿದ್ವಾಂಸರ ಪ್ರಕಾರ, ಇದರಲ್ಲಿಯ ಸಂಗತಿಗಳು ಮನುಷ್ಯ ಬದುಕಿದ್ದಾಗಲೇ ಅರಿತು ವಿವೇಚನೆಗೊಡ್ಡಿ ಅನ್ವಯಿಸಿಕೊಳ್ಳಬೇಕಾದವುಗಳೇ ಹೊರತು ಮರಣಾನಂತರವಲ್ಲ. ಅಲ್ಲಿ ಹೇಳಿದ ಪಶುಲೋಕದ ಬಾರ್ದೋ ವಿಷಯಕ್ಕೇ ಬಂದರೆ; ‘ಸತ್ತ ನಂತರ ನಗಲಾಗುವುದಿಲ್ಲ’ ಎಂಬುದನ್ನೂ, ‘ನಗುವಿನ ಅನುಪಸ್ಥಿತಿಯೇ ನರಕ’ವೆಂಬುದನ್ನೂ ಅದು ಸೂಚಿಸುತ್ತಿರುವುದು ಸ್ಪಷ್ಟವಾಗಿದೆ.

ಹೀಗೆ ಇನ್ನಷ್ಟು ನಗುವಿನ ಮಹತ್ವ ಹೇಳಹೊರಡುವುದು ಕ್ಲೀಷೆಯೇ ಸರಿ. ಈ ಲೇಖನದ ಉದ್ದೇಶವೂ ಅದಲ್ಲ. ನನ್ನ ಕುತೂಹಲವಿರುವುದು – ಇಂತಿಪ್ಪ ನಗು ಅಥವಾ ಹಾಸ್ಯಕ್ಕೆ ನಮ್ಮ ಸಾರಸ್ವತ ಲೋಕ ಅಷ್ಟೇ ಪ್ರಾಮುಖ್ಯತೆ ಕೊಟ್ಟಿದೆಯೆ? ಹಾಗೂ ಹಾಸ್ಯವನ್ನು ವೈಯಕ್ತಿಕವಾಗಿ ನಾವೆಷ್ಟು ಆಪ್ತವಾಗಿ ಸ್ವೀಕರಿಸುತ್ತೇವೆ ಎಂಬುದರಲ್ಲಿ.

ಪುರಾಣದ ಕಥೆಗಳನ್ನೇ ತೆಗೆದುಕೊಳ್ಳಿ. ರಾಮಾಯಣದಲ್ಲಿ ಶೂರ್ಪನಖಿಯ ಮೂಗನ್ನು ಛೇದಿಸುವ ಪ್ರಸಂಗ, ಮಾರುತಿಯು ಲಂಕಾನಗರಿಯಲ್ಲಿ ಮಾಡುವ ಕಿಡಿಗೇಡಿತನಗಳಂತ ಕೆಲವು ಪ್ರಸಂಗಗಳನ್ನು ಹೊರತುಪಡಿಸಿದರೆ ಹಾಸ್ಯಸನ್ನಿವೇಶಗಳು ಅತಿ ವಿರಳ. ಹರಿಶ್ಚಂದ್ರ ಕಾವ್ಯ, ಮಹಾಭಾರತ, ನಳಚರಿತ್ರೆಗಳೂ ಕೂಡಾ ಇದೇ ಸಾಲಿಗೆ ಸೇರುವಂಥದ್ದೇ. ಮಕ್ಕಳಾಟದ ವಿನೋದದಲ್ಲಿ, ಶೃಂಗಾರ ಪ್ರಸಂಗಗಳಲ್ಲಿ, ರಾಜರುಗಳ ಹುಸಿ ಪೌರುಷ ಪ್ರದರ್ಶನ, ವೀರರ ನಡುವಿನ ಮೂದಲಿಕೆಯ ಮಾತು, ವಾಗ್ವಾದದಲ್ಲಿಯ ಚತುರತೆ ಇತ್ಯಾದಿ ಹಲವಾರು ಕಡೆಯಲ್ಲೆಲ್ಲ ಹಾಸ್ಯ ಮಿಂಚಿ ಮರೆಯಾಗುತ್ತದಾದರೂ ಹಾಸ್ಯವನ್ನೇ ಸ್ಥಾಯೀಭಾವವಾಗಿಟ್ಟುಕೊಂಡು ರಚಿತವಾದ ಪೌರಾಣಿಕ ಕೃತಿಗಳು ಕಡಿಮೆ.